KARNATAK UNIVERSITY, DHARWAD
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

Examination G.A.D. Section
ಪರೀಕ್ಷಾ ಸಾಮಾನ್ಯ ಆಡಳಿತ ವಿಭಾಗ

"NAAC Accredited with "A" Grade 2022"

ಪಾವಟೆನಗರ, ಧಾರವಾಡ
Pavate Nagar, Dharwad

Fax No. 0837-2741928
Tel Ph No. 0836-2215267
Website : www.kud.ac.in

ನಂ. ಕವಿವಿ/ಪರೀಕ್ಷಾ/ಜಿಎಡಿ/2024/ 1356 ದಿನಾಂಕ: 09/02/2024

## ಅಧಿಸೂಚನೆ

ವಿಷಯ: ಮಾರ್ಚ/ಎಪ್ರೀಲ್ 2024 ರಲ್ಲಿ ಜರುಗುವ ಸ್ನಾತಕೋತ್ತರ 1, 3 ಮತ್ತು 5 ನೇ ಸೆಮಿಸ್ಟರ್ (ಸಿ.ಬಿ.ಸಿ.ಎಸ್/ನಾನ್ ಸಿ.ಬಿ.ಸಿ.ಎಸ್) ಕೋರ್ಸುಗಳಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಕೊನೆಯ ಸುವರ್ಣಾವಕಾಶದಡಿಯಲ್ಲಿ (OTM) ಪರೀಕ್ಷಾ ಫಾರ್ಮ/ಶುಲ್ಕ ತುಂಬುವ ಕುರಿತು.

ಉಲ್ಲೇಖ: 1) ಸಿಂಡಿಕೇಟ ಠರಾವು ಸಂಖ್ಯೆ 15 ದಿನಾಂಕ:28/07/2023
2) ಮಾನ್ಯ ಕುಲಪತಿಗಳ ಆದೇಶ ದಿನಾಂಕ:08/12/2023

*****

ಕ.ವಿ.ವಿ. ವ್ಯಾಪ್ತಿಯಲ್ಲಿ ಬರುವ ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು, ಆಡಳಿತಾಧಿಕಾರಿಗಳು, ಸಂಯೋಜಕರು ಹಾಗೂ ಎಲ್ಲ ಸ್ನಾತಕೋತ್ತರ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಮಾರ್ಚ/ಎಪ್ರೀಲ್ 2024 ರಲ್ಲಿ ಜರುಗುವ ಎಲ್ಲ ಸ್ನಾತಕೋತ್ತರ 1, 3 ಮತ್ತು 5 ನೇ ಸೆಮಿಸ್ಟರ್ (ಸಿ.ಬಿ.ಸಿ.ಎಸ್/ನಾನ್ ಸಿ.ಬಿ.ಸಿ.ಎಸ್) ಕೋರ್ಸುಗಳಲ್ಲಿ ನಿಗದಿತ ದ್ವಿ-ಅವಧಿಯೊಳಗಾಗಿ (Double the duration of the Course) ಪದವಿ ಪೂರ್ಣಗೊಳಿಸದೆ ಇದ್ದಂತಹ ವಿದ್ಯಾರ್ಥಿಗಳಿಗೆ ಒಂದು ಬಾರಿ ಸುವರ್ಣಾವಕಾಶದಡಿಯಲ್ಲಿ (OTM) ಅವಕಾಶವನ್ನು ನೀಡಲಾಗಿದೆ. (ಮೇಜರ್/ಮೈನರ್ ವಿಷಯಗಳನ್ನು ಹೊರತುಪಡಿಸಿ) ಅಂತಹ ವಿದ್ಯಾರ್ಥಿಗಳಿಂದ ಪರೀಕ್ಷಾ ಫಾರ್ಮ/ಶುಲ್ಕ ತುಂಬಿಸಿಕೊಳ್ಳುವಾಗ ಈ ಕೆಳಗಿನ ವಿವರವಾದ ಸೂಚನೆಗಳನ್ನು ಹಾಗೂ ಕೊನೆಯ ದಿನಾಂಕವನ್ನು ಗಮನಿಸಬೇಕು. ಪರೀಕ್ಷಾ ವಿಭಾಗಕ್ಕೆ ಅರ್ಜಿಗಳನ್ನು ಸಲ್ಲಿಸುವಾಗ ಪಾವತಿಸಿದ ಮೂಲ ಚಲನ ಪ್ರತಿ ಹಾಗೂ ಅಗತ್ಯ ದಾಖಲೆಗಳ ಝರಾಕ್ಸ ಪ್ರತಿಗಳನ್ನು ಲಗತ್ತಿಸಿ ಸಲ್ಲಸಬೇಕು. ಪರೀಕ್ಷಾ ವೇಳಾಪಟ್ಟಿಯನ್ನು ಕ.ವಿ.ವಿ. ಅಂತರಜಾಲದಲ್ಲಿ **(www.kud.ac.in (Notification)** ನಂತರ ಪ್ರಕಟಿಸಲಾಗುವುದು.

1) ದಿನಾಂಕ:09/02/2024 ರಿಂದ ವಿದ್ಯಾರ್ಥಿಗಳು ಪರೀಕ್ಷಾ ಫಾರ್ಮನ್ನು ವಿಭಾಗ/ಮಹಾವಿದ್ಯಾಲಯದಿಂದ ಅಥವಾ ಕವಿವಿ ಅಂತರ್ಜಾಲ (www.kud.ac.in (Notification)) ದಿಂದ ಪಡೆದುಕೊಂಡು, SBI Online Portal ಮೂಲಕ ಪರೀಕ್ಷಾ ಶುಲ್ಕ ಭರಿಸಿ ವಿಭಾಗ/ಮಹಾವಿದ್ಯಾಲಯಕ್ಕೆ ದಂಡವಿಲ್ಲದೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:17/02/2024

2) ವಿದ್ಯಾರ್ಥಿಗಳು ₹.180/- ದಂಡದೊಂದಿಗೆ ಪರೀಕ್ಷಾ ಫಾರ್ಮನ್ನು ವಿಭಾಗ/ಮಹಾವಿದ್ಯಾಲಯದಿಂದ ಅಥವಾ ಕವಿವಿ ಅಂತರ್ಜಾಲ (www.kud.ac.in (Notification)) ದಿಂದ ಪಡೆದುಕೊಂಡು, SBI Online Portal ಮೂಲಕ ಪರೀಕ್ಷಾ ಶುಲ್ಕವನ್ನು ಭರಿಸಿ ವಿಭಾಗ/ಮಹಾವಿದ್ಯಾಲಯಕ್ಕೆ ಸದರಿ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ:20/02/2024

3) ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರು, ಆಡಳಿತಾಧಿಕಾರಿಗಳು, ಸಂಯೋಜಕರು, ಹಾಗೂ ಸ್ನಾತಕೊತ್ತರ ಮಹಾವಿದ್ಯಾಲಯಗಳ ಪ್ರಾಚಾರ್ಯರು ದಂಡವಿಲ್ಲದೇ ಹಾಗೂ ದಂಡದೊಂದಿಗೆ ಸ್ವೀಕರಿಸಿದ ಪರೀಕ್ಷಾ ಅರ್ಜಿಗಳನ್ನು ಹಾಗೂ ಆನ್-ಲೈನ್ ಮೂಲಕ ಭರಿಸಿದ ಶುಲ್ಕದ ರಸೀದಿಗಳನ್ನು ಯಾದಿಗಳ ಜೊತೆಗೆ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವ ಕೊನೆಯ ದಿನಾಂಕ:21/02/2024.

## ಪರೀಕ್ಷಾ ಶುಲ್ಕದ ವಿವರಗಳು ಈ ಕೆಳಗಿನಂತಿವೆ

| Sl.No | Particulars | Fees-₹ | Special Fees-₹ |
|---|---|---|---|
| 01 | ಪರೀಕ್ಷಾ ಅರ್ಜಿ ಶುಲ್ಕ | 100/- | -- |
| 02 | ಅಂಕಪಟ್ಟಿ ಶುಲ್ಕ | 145/- | -- |
| 03 | ಉತ್ತೀರ್ಣ ಪ್ರಮಾಣ ಪತ್ರ ಶುಲ್ಕ (ಕೊನೆಯ ಸೆಮೆಸ್ಟರಿಗೆ ಮಾತ್ರ) | 195/- | -- |
| 04 | ಪ್ರೋಜೆಕ್ಟ/ಫೀಲ್ಡ ವರ್ಕ ರಿಪೋರ್ಟ ಮೌಲ್ಯಮಾಪನ/ವೈವಾ ಶುಲ್ಕ (ಕೊನೆಯ ಸೆಮೆಸ್ಟರಿಗೆ ಮಾತ್ರ) ಸೂಚನೆ: ಪ್ರೋಜೆಕ್ಟ/ಫೀಲ್ಡ ವರ್ಕ ತೆಗೆದುಕೊಂಡ ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕದೊಂದಿಗೆ 535/- ನ್ನು ತುಂಬಬೇಕು. | 535/- | -- |
| 05 | ಪರೀಕ್ಷಾ ಶುಲ್ಕ: ಎಂ.ಎಸ್.ಸಿ. ಅನ್ವಯಿಕ ಭೂಗೋಳಶಾಸ್ತ್ರ-1, ಮತ್ತು 3 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 590/- | 6,655=00 |
| | ಪರೀಕ್ಷಾ ಶುಲ್ಕ: ಎಂ.ಎ. ಭಾಷಾಶಾಸ್ತ್ರ-1 ಮತ್ತು 3 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 665/- | 6,655=00 |
| | ಪರೀಕ್ಷಾ ಶುಲ್ಕ: ಎಂ.ಎ. ಸಮಾಜವಿಜ್ಞಾನ-1 ಮತ್ತು 3 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 665/- | 6,655=00 |
| | ಪರೀಕ್ಷಾ ಶುಲ್ಕ: ಎಂ.ಎಸ್.ಡಬ್ಲೂ ಸಮಾಜಕಾರ್ಯ-1 ಮತ್ತು 3 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 665/- | 6,655=00 |
| | ಪರೀಕ್ಷಾ ಶುಲ್ಕ: ಎಂ.ಎ. ಸಂಗೀತ.- 1 ಮತ್ತು 3 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 700/- | 6,655=00<br>6,655=00 |
| | ಪರೀಕ್ಷಾ ಶುಲ್ಕ: ಎಂ.ಕಾಂ.ವಾಣಿಜ್ಯಶಾಸ್ತ್ರ, 1 ಮತ್ತು 3 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 735/- | 6,655=00 |
| | ಪರೀಕ್ಷಾ ಶುಲ್ಕ: ಎಂ.ಎಸ್.ಸಿ.- 1 ಮತ್ತು 3 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 865/- | 6,655=00 |
| | ಪರೀಕ್ಷಾ ಶುಲ್ಕ: ಎಂ.ಎಸ್.ಸಿ. ಮಾನವಶಾಸ್ತ್ರ-1 ಮತ್ತು 3 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 865/- | 6,655=00 |
| | ಪರೀಕ್ಷಾ ಶುಲ್ಕ: ಎಂ.ಎಸ್.ಸಿ. ಪಾಲಿಮರ ವಿಜ್ಞಾನ-1 ಮತ್ತು 3 ನೇ ಸೆಮೆಸ್ಟರ್, ಪ್ರತಿ ಸೆಮೆಸ್ಟರಗೆ | 865/- | 6,655=00 |
| | ಪರೀಕ್ಷಾ ಶುಲ್ಕ: ಎಂ.ಎಸ್.ಸಿ. ವಿದ್ಯುನ್ಮಾನ-1 ಮತ್ತು 3 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 865/- | 6,655=00 |
| | ಪರೀಕ್ಷಾ ಶುಲ್ಕ: ಎಂ.ಎಸ್.ಸಿ.- ಕಡಲ ಜೀವಶಾಸ್ತ್ರ/ವಿಶ್ಲೇಷಕ ರಸಾಯನಶಾಸ್ತ್ರ/ಔದ್ಯೋಗಿಕ ರಸಾಯನಶಾಸ್ತ್ರ/ ಸಾಮಾನ್ಯ ರಸಾಯನಶಾಸ್ತ್ರ-1 ಮತ್ತು 3 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 865/- | 6,655=00 |
| | ಪರೀಕ್ಷಾ ಶುಲ್ಕ: ಎಂ.ಎಲ್.ಐ.ಸಿ. ಗ್ರಂಥಾಲಯ ಹಾಗೂ ಮಾಹಿತಿವಿಜ್ಞಾನ/ಎಂ.ಎ.ಮಹಿಳಾ ಅಧ್ಯಯನ 1 ಮತ್ತು 3 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 1000/- | 6,655=00 |
| | ಪರೀಕ್ಷಾ ಶುಲ್ಕ: ಎಂ.ಟಿ.ಟಿ.ಎಮ್ ಪ್ರವಾಸೋದ್ಯಮ- 1 ಮತ್ತು 3 ನೇ ಸೆಮೆಸ್ಟರ (Lateral Entry) ಪ್ರತಿ ಸೆಮೆಸ್ಟರಗೆ 1 ಪೇಪರಗೆ ₹.300/-, 2 ಪೇಪರಗಳು ₹.595/-, 3 ಪೇಪರಗಳು ₹.890/-, 4 ಕ್ಕಿಂತ ಹೆಚ್ಚು ಪೇಪರಗಳಿಗೆ ₹.1040/- | 1040/- | 6,655=00 |
| | ಪರೀಕ್ಷಾ ಶುಲ್ಕ: ಎಂ.ಇಡಿ. ಶಿಕ್ಷಣ- 1 ಮತ್ತು 3 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 1100/- | 6,655=00 |
| | ಪರೀಕ್ಷಾ ಶುಲ್ಕ: ಎಂ.ಪಿ.ಇಡಿ.ದೈಹಿಕ ಶಿಕ್ಷಣ- 1 ಮತ್ತು 3 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 1315/- | 6,655=00 |
| | ಪರೀಕ್ಷಾ ಶುಲ್ಕ: ಎಲ್.ಎಲ್.ಎಮ್.ಕಾನೂನು – 1 ಮತ್ತು 3 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 1465/- | 6,655=00 |
| | ಪರೀಕ್ಷಾ ಶುಲ್ಕ: ಎಂ.ವ್ಹಿ.ಎ.- 1 ಮತ್ತು 3 ನೇ ಸೆಮೆಸ್ಟರ್, ಪ್ರತಿ ಸೆಮೆಸ್ಟರಗೆ | 1965/- | 6,655=00 |
| | ಪರೀಕ್ಷಾ ಶುಲ್ಕ: ಎಂ.ಎಸ್.ಸಿ ಸೂಕ್ಷ್ಮಜೀವಿಶಾಸ್ತ್ರ- 1 ಮತ್ತು 3 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 2145/- | 6,655=00 |
| | ಪರೀಕ್ಷಾ ಶುಲ್ಕ: ಎಂ.ಎಸ್.ಸಿ ಜೈವಿಕ ತಂತ್ರಜ್ಞಾನ- 1 ಮತ್ತು 3 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 2145/- | 6,655=00 |
| | ಪರೀಕ್ಷಾ ಶುಲ್ಕ: ಎಂ.ಎಸ್.ಸಿ ಅನ್ವಯಿಕ ಅನುವಂಶಶಾಸ್ತ್ರ- 1 ಮತ್ತು 3 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 2145/- | 6,655=00 |
| | ಪರೀಕ್ಷಾ ಶುಲ್ಕ:: ಎಂ.ಎಸ್.ಸಿ ಪಲ್ಪ್ ಮತ್ತು ಪೇಪ್‌ರ ಸಾಯನ್ಸ-1 ಮತ್ತು 3 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 2350/- | 6,655=00 |
| | ಪರೀಕ್ಷಾ ಶುಲ್ಕ: ಎಂ.ಕಾಂ.(ಸಿ.ಎಸ್) 1 ಮತ್ತು 3 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 2435/- | 6,655=00 |
| | ಪರೀಕ್ಷಾ ಶುಲ್ಕ: ಎಂ.ಎಸ್.ಸಿ(ಕಂಪ್ಯೂಟರ ಸಾಯನ್ಸ್) 1 ಮತ್ತು 3 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 2740/- | 6,655=00 |
| | ಪರೀಕ್ಷಾ ಶುಲ್ಕ: ಮಾಸ್ಟರ ಇನ್ ಮಾರ್ಕೆಟಿಂಗ 1 ಮತ್ತು 3 ನೇ ಸೆಮೆಸ್ಟರ್ ಪ್ರತಿ ಸೆಮೆಸ್ಟರಗೆ | 2740/- | 6,655=00 |
| | ಪರೀಕ್ಷಾ ಶುಲ್ಕ: ಎಂ.ಸಿ.ಎ. 1, 3 ಮತ್ತು 5 ನೇ ಸೆಮಿಸ್ಟರ್ ಪ್ರತಿ ಸೆಮೆಸ್ಟರಗೆ | 2740/- | 6,655=00 |
| | ಪರೀಕ್ಷಾ ಶುಲ್ಕ: ಎಂ.ಬಿ.ಎ/ಎಂ.ಎಸ್.ಇ 1, 3 ಮತ್ತು 5 ನೇ ಸೆಮಿಸ್ಟರ್ ಪ್ರತಿ ಸೆಮೆಸ್ಟರಗೆ | 2575/- | 6,655=00 |

## ಸೂಚನೆಗಳು

1) ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿಯನ್ನು (Blank OMR) ವಿಭಾಗ/ಮಹಾವಿದ್ಯಾಲಯದಿಂದ ಅಥವಾ ಕವಿವಿ ಅಂತರ್ಜಾಲ **(www.kud.ac.in (Notification))** ದಿಂದ ಪಡೆಯಬಹುದು. ಪರೀಕ್ಷಾ ಶುಲ್ಕದ ಜೊತೆಗೆ ಪ್ರತಿ ವಿದ್ಯಾರ್ಥಿಯು ರೂ.100/- ನ್ನು ಅಂತರಜಾಲದ ಫಾರ್ಮ ನಮೂನೆ ಪ್ರಕ್ರಿಯೆ ಶುಲ್ಕ (ಪ್ರತಿ ಸೆಮಿಸ್ಟರ್‌ಗೆ) ಮತ್ತು ರೂ. 145/-ನ್ನು ಅಂಕಪಟ್ಟಿ ಶುಲ್ಕವೆಂದು ಪಾವತಿಸಬೇಕಾಗುತ್ತದೆ. ಕೊನೆಯ ಸುವರ್ಣಾವಕಾಶ ಪರೀಕ್ಷೆ ಇರುವದರಿಂದ ಪರೀಕ್ಷಾ ಶುಲ್ಕ ಭರಿಸುವದರ ಸಲುವಾಗಿ ಯಾವುದೇ ವರ್ಗದ ವಿದ್ಯಾರ್ಥಿಗಳಿಗೆ ವಿನಾಯಿತಿ/ರಿಯಾಯಿತಿ ಇರುವದಿಲ್ಲ.

2) ಅಂತಿಮ ವರ್ಷದ ಪರೀಕ್ಷೆಗೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಮತ್ತು ಅಂಕಪಟ್ಟಿ ಶುಲ್ಕದೊಂದಿಗೆ ಉತ್ತೀರ್ಣ ಪ್ರಮಾಣ ಪತ್ರದ ಶುಲ್ಕ ₹.195/- ಗಳನ್ನು ಪಾವತಿಸಬೇಕು. (ಈ ಹಿಂದೆ ನಿಯಮಿತ (ರೆಗ್ಯೋಲರ್) ವಿದ್ಯಾರ್ಥಿಯಾಗಿ ಪರೀಕ್ಷಾ ಅರ್ಜಿ ಸಲ್ಲಿಸುವಾಗ ಉತ್ತೀರ್ಣ ಪ್ರಮಾಣ ಪತ್ರದ ಶುಲ್ಕ ತುಂಬಿದಲ್ಲಿ ಅಂತಹ ವಿದ್ಯಾರ್ಥಿಗಳು ಮತ್ತೊಮ್ಮೆ ಭರಿಸುವ ಅವಶ್ಯಕತೆ ಇರುವದಿಲ್ಲಾ.)

3) ಅನುತ್ತೀರ್ಣಗೊಂಡ ವಿದ್ಯಾರ್ಥಿಗಳು ಪ್ರತಿಯೊಂದು ಸೆಮಿಸ್ಟರ್‌ಗೆ ಪ್ರತ್ಯೇಕವಾಗಿ ಪರೀಕ್ಷಾ ಅರ್ಜಿ ಫಾರ್ಮ ತುಂಬಲು ತಿಳಿಸಲಾಗಿದೆ.

4) ಮಹಾವಿದ್ಯಾಲಯದ ಸಿಬ್ಬಂದಿಗಳು ವಿದ್ಯಾರ್ಥಿಗಳಿಂದ ಸ್ವೀಕರಿಸಿದ ಪರೀಕ್ಷಾ ಶುಲ್ಕವನ್ನು ಕ್ರೋಢಿಕರಿಸಿ SBI Online Portal ಮುಖಾಂತರ ಪರೀಕ್ಷಾ ಶುಲ್ಕ ಭರಿಸುವುದು.

5) ಮಹಾವಿದ್ಯಾಲಯದ ಸಿಬ್ಬಂದಿಯವರು ವಿದ್ಯಾರ್ಥಿಗಳಿಂದ ಭರ್ತಿ ಮಾಡಲ್ಪಟ್ಟ ಪರೀಕ್ಷಾ ಫಾರ್ಮ/ಶುಲ್ಕಗಳ ವಿವರಗಳ ಜೊತೆಗೆ ದಾಖಲೆಗಳನ್ನು/ಯಾದಿಯನ್ನು ದ್ವಿ-ಪ್ರತಿಯಲ್ಲಿ ತಯಾರಿಸಿ ಒಂದು ಪ್ರತಿಯನ್ನು ಸಂಬಂಧಪಟ್ಟ ಶಾಖೆಯ ಅಧೀಕ್ಷಕರು, ಪರೀಕ್ಷಾ ವಿಭಾಗ ಇವರಿಗೆ ಹಾಗೂ ಇನ್ನೊಂದು ಪ್ರತಿಯನ್ನು ಸಿಸ್ಟಮ್ ಎನಾಲಿಸ್ಟ್, ಗಣಕಯಂತ್ರ ಕೇಂದ್ರ ಪರೀಕ್ಷಾ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸುವುದು.

6) ಕೊನೆಯ ದಿನಾಂಕದ ನಂತರ ಬಂದಂತಹ ಪರೀಕ್ಷಾ ಫಾರ್ಮನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. ಪ್ರಾಚಾರ್ಯರು ಸದರಿ ಅಧಿಸೂಚನೆಯನ್ವಯ ವಿವರಗಳನ್ನು ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ತಿಳಿಸತಕ್ಕದ್ದು ಅದರಂತೆ ಕ್ರಮಜರುಗಿಸುವುದು. ಎಲ್ಲಾ ವಿಧ್ಯಾರ್ಥಿಗಳಿಗೆ ಕೊನೆಯ ಸುವರ್ಣಾವಕಾಶವಿದ್ದು ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಲು ಎಲ್ಲಾ ವಿದ್ಯಾರ್ಥಿಗಳಿಗೆ ಈ ಮೂಲಕ ತಿಳಿಸಲು ಸೂಚಿಸಲಾಗಿದೆ.

7) ಪರೀಕ್ಷಾ ಕೇಂದ್ರಗಳ ವಿವರಗಳನ್ನು ಹಾಗೂ ಪರೀಕ್ಷಾ ವೇಳಾಪಟ್ಟಿಯನ್ನು ಪ್ರತ್ಯೇಕವಾಗಿ ಕ.ವಿ.ವಿ. ಅಂತರ್ಜಾಲ (www.kud.ac.in (Notification)) ದಲ್ಲಿ ಪ್ರಕಟಿಸಲಾಗುವುದು ಹಾಗೂ ಮಹಾವಿದ್ಯಾಲಯಗಳ ಇಮೇಲ್ ವಿಳಾಸಕ್ಕೆ ಕಳಿಸಲಾಗುವುದು.

8) ವಿದ್ಯಾರ್ಥಿಗಳು ಪರೀಕ್ಷಾ ಫಾರ್ಮನ್ನು ಸಂಬಂಧಿಸಿದ ಪ್ರಾಚಾರ್ಯರ ಸಹಿಯೊಂದಿಗೆ ಮಹಾವಿದ್ಯಾಲಯಕ್ಕೆ ಸಲ್ಲಿಸುವುದು. ಒಂದು ವೇಳೆ ಸ್ಥಗಿತಗೊಂಡ/ಮುಚಲ್ಪಟಂತಹ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು ಮಾತ್ರ ಪರೀಕ್ಷಾ ಶುಲ್ಕವನ್ನು SBI Online Portal ಮುಖಾಂತರ ಭರಿಸಿ ನೇರವಾಗಿ ಕರ್ನಾಟಕ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದ ಶಾಖೆಯಲ್ಲಿ ಪರೀಕ್ಷಾ ಫಾರ್ಮನ್ನು ಸಲ್ಲಿಸುವುದು.

9/2

**ಕುಲಸಚಿವರು(ಮೌಲ್ಯಮಾಪನ)**

**ಗೆ,**

1) ಮುಖ್ಯಸ್ಥರು/ಸಂಯೋಜಕರು, ಎಲ್ಲ ಸ್ನಾತಕೋತ್ತರ ವಿಭಾಗಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2) ಆಡಳಿತಾಧಿಕಾರಿಗಳು, ಎಲ್ಲ ಸ್ನಾತಕೋತ್ತರ ಕೇಂದ್ರಗಳು, ಗದಗ, ಹಾವೇರಿ, ಕಾರವಾರ
3) ಕವಿವಿ ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ.

**ಪ್ರತಿಗಳು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ:**

1) ಹಣಕಾಸು ಅಧಿಕಾರಿಗಳು, ಹಣಕಾಸು ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2) ಅಭಿವೃದ್ಧಿ ಅಧಿಕಾರಿಗಳು, ಅಂಕಿ ಸಂಖ್ಯೆ ವಿಭಾಗ/ ಶಿಷ್ಯವೇತನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
3) ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ವಿಭಾಗ,/ಎಸ್‌ಸಿ/ಎಸ್‌ಟಿ/ಕೆ-1/ಓಬಿಸಿ ಘಟಕ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
4) ನಿರ್ದೇಶಕರು ಮಾಹಿತಿ ತಂತ್ರಜ್ಞಾನ ವಿಭಾಗ ಕ.ವಿ.ವಿ. ಧಾರವಾಡ. (ಅಧಿಸೂಚನೆಯನ್ನು ಅಂತರ್ಜಾಲದಲ್ಲಿ ವಿತರಿಸುವುದು.)
5) ಆಪ್ತಕಾರ್ಯದರ್ಶಿಗಳು, ಕುಲಪತಿಗಳು/ಕುಲಸಚಿವರು/ಕುಲಸಚಿವರು (ಮೌಲ್ಯಮಾಪನ)/ವಿತ್ತಾಧಿಕಾರಿಗಳು, ಕ ವಿ ವಿ, ಧಾರವಾಡ.
6) ಸಿಸ್ಟಮ್ ಎನಾಲಿಸ್ಟ್, ಪರೀಕ್ಷಾ ಗಣಕಯಂತ್ರ ವಿಭಾಗ, ಕ.ವಿ.ವಿ. ಧಾರವಾಡ.
7) ಉಪಕುಲಸಚಿವರು/ ಸಹಾಯಕ ಕುಲಸಚಿವರು, ಪರೀಕ್ಷಾ/ ಹಣಕಾಸು/ ವಿದ್ಯಾಮಂಡಳ ವಿಭಾಗ, ಕ ವಿ ವಿ, ಧಾರವಾಡ.
8) ಅಧೀಕ್ಷಕರು, ಹಣಕಾಸು/ ವಿದ್ಯಾಮಂಡಳ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
9) ಅಧೀಕ್ಷಕರು, ಗೌಪ್ಯ/ ಪ್ರಶ್ನೆಪತ್ರಿಕೆ/ ಸ್ನಾತಕೋತ್ತರ/ಬಿ.ಎ./ಬಿ.ಕಾಂ./ಬಿ.ಎಸ್.ಸಿ./ಕಾನೂನು/ಘಟಿಕೋತ್ಸವ ಪರೀಕ್ಷಾ ವಿಭಾಗ, ಕ ವಿ ವಿ, ಧಾರವಾಡ.